ಶ್ರೀ ಹೆಚ್. ಟಿ. ಕೃಷ್ಣಪ್ಪ.—ಸರ್ಕಾರ ಬೇಡಿಕೆಗಳ ಬಗ್ಗೆ ಕೊಟ್ಟಿರತಕ್ಕ ಆಶ್ವಾಸನೆಗಳು ಎಷ್ಟರ ಮಟ್ಟಿಗೆ ಪ್ರಗತಿಯಾಗಿವೆ ಎಂಬ ಬಗ್ಗೆ ವಿಪ್ಸುಲ್ ತಿಂಗಳ ಕೊನೇ ವಾರದಲ್ಲಿ ಸಮೀಕ್ಷೆ ಮಾಡಲಾಗುವುದು. ಅದರಲ್ಲಿಯೂ ಕೊರತೆ ಕಂಡು ಬಂದರೆ ಕೂಡಲೇ ಸರಿಪಡಿಸುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇವೆ.

(೪) ಸರ್ಕಾರಿ ಉಪಹಾರ ಮಂದಿರದ ನೌಕರರನ್ನು ಸರ್ಕಾರಿ ನೌಕರರನ್ನಾಗಿ ಪರಿಗಣಿಸುವ ಬಗ್ಗೆ

ಶ್ರೀ ಕೆ. ಲಕ್ಕಪ್ಪ.—ಮಾನ್ಯ ಅಧ್ಯಕ್ಷರೆ, ಸರ್ಕಾರಿ ಉಪಹಾರ ಮಂದಿರದಲ್ಲಿ ಕೆಲಸ ಮಾಡುತ್ತಿರುವ ನೌಕರರುಗಳ ಕಾಯಂಮಾಡಿಕೊಳ್ಳುವ ವಿಚಾರದಲ್ಲಿ ನಾನು ಮಾನ್ಯ ಮುಖ್ಯ ಮಂತ್ರಿಯವರ ಗಮನ ಸೆಳೆಯುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್ (ಮುಖ್ಯ ಮಂತ್ರಿಗಳ ಪರವಾಗಿ).—

ಕರ್ನಾಟಕ ಸರ್ಕಾರದ ಸಚಿವಾಲಯದ ನೌಕರರ ಉಪಯೋಗಕ್ಕಾಗಿ ೧ನೇ ಮಾರ್ಚ್ ೧೯೭೮ ರಿಂದ ಒಂದು ಉಪಾಹಾರ ಮಂದಿರವನ್ನು ಪ್ರಾರಂಭಿಸಲಾಗಿದೆ. ಈ ಉಪಾಹಾರ ಮಂದಿರವನ್ನು ಒಂದು ಸಮಿತಿಯ ಮೂಲಕ ನಡೆಸಿಕೊಂಡು ಬರಲಾಗುತ್ತಿದ್ದು ಇದು ಕೇವಲ ತಾತ್ಕಾಲಿಕ ವ್ಯವಸ್ಥೆಯಾಗಿದೆ. ಇದನ್ನು ಪ್ರತಿ ವರ್ಷವೂ ಮುಂದುವರೆಸಿಕೊಂಡು ಬರಲಾಗುತ್ತಿದೆ. ಇಲ್ಲಿ ಕೆಲಸ ಮಾಡುವ ನೌಕರರನ್ನು ಆ ಸಮಿತಿಯೇ ನೇಮಿಸುತ್ತಿದ್ದು, ಅವರಿಗೆ ಸಂಬಳ ಇತ್ಯಾದಿಗಳನ್ನು ಕನಿಷ್ಠ ವೇತನ ಕಾಯ್ದೆಯಂತೆ ಕೊಡಲಾಗುತ್ತಿದೆ. ಇದರ ಹೊರತಾಗಿ ಈ ನೌಕರರಿಗೆ ಕೆಳಕಂಡ ಸೌಲಭ್ಯಗಳನ್ನು ಕೊಡಲಾಗುತ್ತಿದೆ :

೧ ಭವಿಷ್ಯ ನಿಧಿ ಸೌಲಭ್ಯ ೨ ಚಿಕಿತ್ಸಾ ಶುಲ್ಕ ಮರುಪಾವತಿ
೩ ಪರಿಹಾರ ಭತ್ಯ ೪ ಸಾಂದರ್ಭಿಕ ಹಾಗೂ ವೈದ್ಯಕೀಯ ರಜೆ
೫ ರಜಾ ನಗದೀಕರಣ ೬ ಬೋನಸ್ ೭ ದಸರಾ ರಾಜ್ಯೋತ್ಸವ ಉಡುಗೊರೆ ೮ ಹಬ್ಬದ ಮುಂಗಡ ೯ ಸಮವಸ್ತ್ರ ಇತ್ಯಾದಿ

ಈ ನೌಕರರನ್ನು ಸರ್ಕಾರದ ಅತಿಥಿಗೃಹಗಳ ನೌಕರರಂತೆ ಪರಿಗಣಿಸಲು ಸಾಧ್ಯವಿಲ್ಲ. ಕಾರಣ ಅತಿಥಿಗೃಹಗಳ ನೌಕರರನ್ನು ನೇಮಕಾತಿ ನಿಯಮಗಳನ್ವಯ ನೇಮಕ ಮಾಡಲಾಗುತ್ತಿದೆ. ಆದರೆ ಈ ಉಪಾಹಾರ ಮಂದಿರದ ಸಿಬ್ಬಂದಿಯನ್ನು ಅಂತಹ ಯಾವುದೇ ನಿರ್ದಿಷ್ಟ ನಿಯಮಗಳನ್ವಯ ನೇಮಕ ಮಾಡಿಲ್ಲ.

ಈ ಉಪಾಹಾರ ಮಂದಿರ ಸಂಘದ ನೌಕರರು ಸರ್ಕಾರಕ್ಕೆ ಒಂದು ಮನವಿಯನ್ನು ಸಲ್ಲಿಸಿ, ತಮ್ಮನ್ನು ಸರ್ಕಾರಿ ನೌಕರರನ್ನಾಗಿ ಪರಿಗಣಿಸಲು ಕೋರಿದ್ದಾರೆ. ಈ ಕೋರಿಕೆಯನ್ನು ಪರಿಶೀಲಿಸುವುದಕ್ಕಾಗಿ ನೆರೆಹೊರೆ ರಾಜ್ಯಗಳ ಸಚಿವಾಲಯದ ಉಪಾಹಾರ ಮಂದಿರಗಳ ನೌಕರರಿಗೆ ಒದಗಿಸಲಾಗುತ್ತಿರುವ ಸೌಲಭ್ಯಗಳ ಬಗೆಗೆ ಮಾಹಿತಿಯನ್ನು ಪಡೆಯಲಾಗುತ್ತಿದೆ, ಈ ಮಾಹಿತಿ ಲಭ್ಯವಾದ ಕೂಡಲೇ ಮುಂದಿನ ಕ್ರಮ ಕೈಗೊಳ್ಳಲಾಗುವುದು.

ಶ್ರೀ ಕೆ. ಲಕ್ಕಪ್ಪ, —ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಯವರು ಅಧಿಕಾರಿಗಳು ಕೊಟ್ಟ ಅತಿ ಬುದ್ಧಿವಂತಿಕೆಯ ಉತ್ತರದಿಂದ ನೌಕರರ ಸಮಸ್ಯೆಗಳು ಬಗೆಹರಿಯುವುದಿಲ್ಲ. ಮಾನವೀಯತೆಯ ದೃಷ್ಟಿಯಿಂದ ಸರ್ಕಾರ ಗಮನ ಹರಿಸಬೇಕಾಗಿದೆ. ಪ್ರತಿ ದಿನ ವಿಧಾನಸೌಧದ ಅಧಿಕಾರಿಗಳ, ಹಾಗೂ ನೌಕರರ ಸೇವೆ ಮಾಡುತ್ತಿರುವ ಕೆಲಸಗಾರರನ್ನು ಕಳೆದ ೧೨ ವರ್ಷಗಳಿಂದಲೂ ಶೋಷಿಸಿಕೊಂಡು ಬರಲಾಗುತ್ತಿದೆ. ಕರ್ನಾಟಕ ಗೌರ್ನಮೆಂಟ್ ಸೆಕ್ರೆಟೇರಿಯೇಟ್ ಡಿಪಾರ್ಟ್‌ಮೆಂಟ್ ಕ್ಯಾಂಟೀನ್ ಎಂದು ಇದೆ, ಇದರ ಪಾಲೀಕರು ಮುಖ್ಯ ಕಾರ್ಯದರ್ಶಿಯವರು. ಉಸ್ತುವಾರಿ ನೋಡಿಕೊಳ್ಳುವುದಕ್ಕೊಂದು ಸರ್ಕಾರದ ಸಮಿತಿ ಇದೆ. ನೇಮಕಾತಿಯನ್ನು ಕಾನೂನು ಪ್ರಕಾರ ಮಾಡಿಲ್ಲ ಎನ್ನುವ ಕಾರಣಕ್ಕಾಗಿ ಅವರುಗಳನ್ನು ಸರ್ಕಾರೀ ನೌಕರರೆಂದು ಪರಿಗಣಿಸುವುದಿಲ್ಲವೆನ್ನುವುದು ವಿಷಾದಕರವಾದ ಸಂಗತಿ. ವಿಧಾನಸೌಧದ ನೆರೆಹೊರೆಯಲ್ಲಿಯೇ ಕೆಲಸ ಮಾಡತಕ್ಕ ಕೆಲಸಗಾರರ ಬಗ್ಗೆ ಪ್ರಶ್ನೆ ಇಲ್ಲದೇ ಹೋದರೆ, ಸಾಮಾನ್ಯ ಜನರ ಬಗ್ಗೆ ಯಾವ ರೀತಿಯ ಕಳಕಳಿ ಇದೆ ಎನ್ನುವುದನ್ನು ಪ್ರಶ್ನೆ ಮಾಡಬೇಕಾಗುತ್ತದೆ. ಈಗ ಕುಮಾರ ಕೃಪ ಗೆಸ್ಟ್ ಹೌಸ್ ಇದೆ, ಕರ್ನಾಟಕ ಭವನ ಗೆಸ್ಟ್ ಹೌಸ್ ಇದೆ, ಆ ಗೆಸ್ಟ್ ಹೌಸ್‌ನಲ್ಲಿ

ಕೆಲಸ ಮಾಡುತಕ್ಕವರಿಗೆ ಯಾವ ರೀತಿ ಸರ್ಕಾರಿ ನೌಕರರೆಂದು ಪರಿಗಣಿಸಿದ್ದೀರೋ, ಆದೇ ರೀತಿ ಇವರಿಗೂ ಸರ್ಕಾರಿ ನೌಕರರೆಂದು ಪರಿಗಣಿಸಿ. ಇವರಿಗೆ ಕೊಡಬೇಕಾದ ಕನಿಷ್ಟ ಸಂಬಳ ಏನಿದೆ ಅದು ಸಹ ಅವರಿಗೆ ಸಿಕ್ಕುತ್ತಿಲ್ಲ. ಲೋಕೇಶ್ ಎನ್ನುವವರಿಗೆ ಎರಡು ರೂಪಾಯಿ ಕೂಲಿ ಕೊಡುತ್ತಿದ್ದಾರೆ. ವಿಧಾನ ಸೌಧದಲ್ಲಿಯೇ ಇದು ನಡೆಯುತ್ತಿದೆ. ಅಧಿಕಾರಿಗಳ ಸಮ್ಮುಖದಲ್ಲಿಯೇ ಇದು ನಡೆಯುತ್ತಿದೆ. ಮಹಾರಾಷ್ಟ್ರ ಸರ್ಕಾರ ಗೆಸ್ಟ್ ಹೌಸ್ ನೌಕರರಿಗೆ ಸರ್ಕಾರಿ ನೌಕರರು ಎಂದು ಪರಿಗಣಿಸಿದೆ. ಆದುದರಿಂದ, ಈ ನೌಕರರನ್ನು ಸರ್ಕಾರಿ ನೌಕರರೆಂದು ಪರಿಗಣಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.—ಅಧ್ಯಕ್ಷರೆ, ವಿಚಾರ ಇಷ್ಟೆ, ಇವರನ್ನು ಸರ್ಕಾರಿ ನೌಕರರೆಂದು ಪರಿಗಣಿಸುತ್ತೀರಾ ಅಥವಾ ಇಲ್ಲವೇ ಏನ್ನುವ ವಿಚಾರ ಇದೆ. ಈ ವಿಷಯದ ಬಗ್ಗೆ ಸರ್ಕಾರದ ನಿಲುವು ಏನು. ನೆರೆಹೊರೆ ರಾಜ್ಯಗಳಿಂದ ಮಾಹಿತಿ ತರಿಸಿಕೊಂಡು ನೋಡಬೇಕಾಗುತ್ತದೆ ಎಂದು ಹೇಳಿದ್ದೀರಿ. ಬೇರೆ ಕಡೆ ಕೊಡದೇ ಇದ್ದರೆ ತಮ್ಮ ನಿಲುವು ಏನು?

ಶ್ರೀ ಆರ್.ಎಸ್. ನಾಯಕ್.—ಅಧ್ಯಕ್ಷರೆ, ಮಾನ್ಯ ಮಂತ್ರಿಗಳ ಉತ್ತರದಲ್ಲಿ ೧-೩-೭೪ರಲ್ಲಿ ಒಂದು ಉಪಾಹಾರ ಮಂದಿರವನ್ನು ಪ್ರಾರಂಭಿಸಲಾಗಿದೆ ಎಂದು ಹೇಳಿದ್ದಾರೆ.

ಅಧ್ಯಕ್ಷರು.—ಮಾನ್ಯ ಮಂತ್ರಿಗಳು ಉತ್ತರ ಹೇಳಿದ್ದಾರೆ, ತಾವು ಪ್ರಶ್ನೆ ಕೇಳಿ.

ಶ್ರೀ ಆರ್.ಎನ್. ನಾಯಕ್.—ಅಧ್ಯಕ್ಷರೆ, ನಾನು ಮಾತನಾಡುವುದು ಬೇಡ ಅಂದರೆ ಕುಳಿತು ಕೊಳ್ಳಬೇಕಾಗುತ್ತದೆ.

ಅಧ್ಯಕ್ಷರು.—ತಾವು ಪ್ರಶ್ನೆ ಕೇಳಿ.

ಶ್ರೀ ಆರ್.ಎನ್. ನಾಯಕ್.—ಅಧ್ಯಕ್ಷರೆ, ನಾನು ಎರಡೇ ಎರಡು ಮಾತ್ಕ ಕೇಳುತ್ತೇನೆ.

ಅಧ್ಯಕ್ಷರು.—ಕ್ಲಾರಿಫಿಕೇಷನ್ ಕೇಳಿ.

ಶ್ರೀ ಆರ್.ಎನ್. ನಾಯಕ್.—ಅಧ್ಯಕ್ಷರೆ, ದಯವಾಡಿ ಅವಕಾಶ ಕೊಡಿ. ಇಲ್ಲಿ ಏನು ಬರೆದಿದ್ದಾರೆ ಎನ್ನುವುದನ್ನು ಹೇಳಬಾರದೆ. ೧-೩-೭೪ರಿಂದ ಒಂದು ಉಪಾಹಾರ ಮಂದಿರ ಪ್ರಾರಂಭಿಸಲಾಗಿದೆ ಎಂದು ಹೇಳಿದ್ದಾರೆ. ಹಾಗೆಯೇ ಪ್ರತಿ ವರ್ಷ ಮುಂದುವರಿಸುತ್ತೇವೆಂದು ಹೇಳಿದ್ದಾರೆ. ಇದೇ ರೀತಿಯಲ್ಲಿ ಬೇರೆ ಕಡೆಯಲ್ಲೂ ನಡೆಸುತ್ತಿದ್ದಾರೆ. ಆದ್ದರಿಂದ, ಅಲ್ಲಿ ಕೆಲಸ ಮಾಡತಕ್ಕ ನೌಕರರಿಗೂ ಮತ್ತು ಇಲ್ಲಿ ಕೆಲಸ ಮಾಡತಕ್ಕ ನೌಕರರಿಗೂ ವ್ಯತ್ಯಾಸ ಏನಿದೆ, ಅವರಿಗೆ ಕೊಡತಕ್ಕ ಸವಲತ್ತುಗಳನ್ನು ಇವರಿಗೆ ಕೊಡಲಿಕ್ಕೆ ಏನು ತೊಂದರೆ ಇದೆ. ಅವರ ನೇಮಕಾತಿ, ಇವರ ನೇಮಕಾತಿ ಒಂದೇ ತರಹ ಇದೆಯೇ, ಅಥವಾ ಬೇರೆ ತರಹ ಇದೆಯೆ. ಒಂದೇ ತರಹ ಇದ್ದಮೇಲೆ ಅವರಿಗೆ ಕೊಡತಕ್ಕ ಸವಲತ್ತುಗಳನ್ನು ಇವರಿಗೂ ಕೊಡಬೇಕಲ್ಲವೆ. ಇವರ ಉತ್ತರದಲ್ಲಿ ಅಶಿಥಿಗೃಹಗಳ ನೌಕರರನ್ನು ನೇಮಕಾತಿ ನಿಯಮಗಳನ್ವಯ ನೇಮಕ ಮಾಡಲಾಗುತ್ತಿದೆ. ಆದರೆ ಈ ಉಪಾಹಾರ ಮಂದಿರದ ಸಿಬ್ಬಂದಿಯನ್ನು ಅಂತಹ ಯಾವುದೇ ನಿರ್ದಿಷ್ಟ ನಿಯಮಗಳನ್ವಯ ನೇಮಕ ಮಾಡಿಲ್ಲ ಎಂಬು ಹೇಳಿದ್ದಾರೆ. ಆವರು ಸರ್ಕಾರದಲ್ಲಿ ಕೆಲಸ ಮಾಡುವವರನ್ನು ಗುರುತಿಸಿದ ಮೇಲೆ ನೂರಕ್ಕೆ ನೂರರಷ್ಟು ಸರಿ ಇದೆ ಎಂದು ತಿಳಿದುಕೊಳ್ಳಬೇಕಾಗುತ್ತದೆ. ಆದುದರಿಂದ, ಆವರಿಗೆ ಎಲ್ಲಾ ಸವಲತ್ತುಗಳನ್ನು ಕೊಡಬೇಕಾಗುತ್ತದೆ. ದಯವಿಟ್ಟು ಅವರಿಗೆ ಅನುಕೂಲ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀಮತಿ ಮುಕ್ತಾರುನ್ನೀಸಾ ಬೇಗಂ.—ಅಧ್ಯಕ್ಷರೆ, ೭೫ ಜನ ಎಂಪ್ಲಾಯೀಸ್ ಈ ಕ್ಯಾಂಟೀನ್‌ನಲ್ಲಿ ಕೆಲಸ ಮಾಡುತ್ತಿದ್ದಾರೆ. ೫ ಜನ ಎಂಪ್ಲಾಯೀಸ್ ಅಂದರೆ ಮ್ಯಾನೇಜರ್. ಅಸಿಸ್ಟೆಂಟ್ ಮ್ಯಾನೇಜರ್, ಜ್ಯೂನಿಯರ್ ಅಸಿಸ್ಟೆಂಟ್, ಟೈಪಿಸ್ಟ್, ಅಸಿಸ್ಟೆಂಟ್ ಈ ೫ ಜನರಿಗೆ ಗವರ್ನ್‌ಮೆಂಟ್ ಸ್ಯಾಲರಿ ಕೊಡುತ್ತಿದ್ದಾರೆ. ದೀಪ, ನೀರು, ವಿದ್ಯುಚ್ಛಕ್ತಿ ಪೀಠೋಪಕರಣಗಳು ಇನ್ನೂ ಮುಂತಾದ್ದನ್ನೆಲ್ಲಾ ಮುಫತ್ತಾಗಿ ಸರ್ಕಾರದಿಂದ ಅವರಿಗೆ ಕೊಟ್ಟಿದ್ದೀರಿ. ಆದರ ಹೆಸರನ್ನು ನೋಡಿದರೆ "ಕರ್ನಾಟಕ ಸರ್ಕಾರದ ಸಚಿವಾಲಯದ ನೌಕರರ ಸಂಘದ ಉಪಾಹಾರ ಮಂದಿರ" ಎಂದು ಇದೆ. ಇದಕ್ಕೆ ಚೀಫ್ ಸೆಕ್ರೆಟರಿಯವರು ಪ್ರೊಪ್ರೈಟರ್ ಆಗಿದ್ದಾರೆ. ಇದಕ್ಕೆ ಒಂದು ರೂಲ್ಸ್ ಏನಿದೆ ಎಂದರೆ, daily rated workers who have completed 5 years of service continuously may be brought into the cadre of monthly rated establishment. That has been done in Public Works Department in respect of its workers in OO. PWD 100 dated

31-1-1984. When a worker continuously working since 5 year their services should be regularised. Then, when you are giving similar benefits to the workers working in Karnataka Bhavan and Kumarakrupa and the same persons working there also under the scheme of Karnataka Government Secretariat Employees Welfare and under the management of an Official Body why not the same benefit given to the employees working in the K rnataka Government Secretariat Employee's Association Canteen. The employees are working in this establishment since 11 years and it is time that they are not able to get job anywhere else, therefore, I request the Hon'ble Minister to consider their demand sympathetically.

ಶ್ರೀ ಬಿ. ಸ್ವಾಮಿರಾವ್. ಸ್ವಾಮಿ, ಕುಮಾರ ಕೃಪ ಗೆಸ್ಟ್ ಹೌಸ್ ಮತ್ತು ದೆಹಲಿಯಲ್ಲಿರುವ ಕರ್ನಾಟಕ ಭವನದಲ್ಲಿ ಯಾವ ರೀತಿ ನೌಕರರನ್ನು ನೇಮಕಾತಿ ಮಾಡಿಕೊಂಡಿದ್ದೀರಿ ಅದೇರೀತಿ ಇವರನ್ನೂ ಮಾಡಿಕೊಳ್ಳಿ. ವಿಧಾನಸೌಧದ ಸುತ್ತಮುಂತ್ತ ಇರತಕ್ಕ ೨-೩ ಕ್ಯಾಂಟೀನ್‌ಗಳಲ್ಲಿ ಏನನ್ನೂ ಕೂಡ ತಿನ್ನುವುದಕ್ಕಾಗುವುದಿಲ್ಲ. ಅಂಥ ಕ್ಯಾಂಟೀನ್‌ಗಳಿವೆ. ಸದ್ಯಕ್ಕೆ ಉತ್ತಮವಾಗಿ ನಡೆಯುತ್ತಿರತಕ್ಕ ಕ್ಯಾಂಟೀನ್ ಎಂದರೆ ನಮ್ಮ ವಿಧಾನ ಸೌಧದ ಸಂಘದ ಉಪಾಹಾರ ಮಂದಿರ. ಈ ಕ್ಯಾಂಟೀನ್‌ನಿಂದ ನಿಮಗೆ ಅದೆರೆ ನಿಮ್ಮ ಕಮಿಟಿಗಳಿಗೆ ಊಟ, ತಿಂಡಿ ಬರುತ್ತದೆ. ಅದು ಯಾವ ರೀತಿ ಇರುತ್ತದೆಂದು ನೀವು ನೋಡಿದ್ದೀರಿ. ಒಳ್ಳೆಯ ಲಾಭದಾಯಕವಾಗಿ ನಡೆಯತಕ್ಕ ಈ ಕ್ಯಾಂಟೀನ್‌ನ್ನು ಬೇರೆಯವರಿಗೆ ಕೊಟ್ಟಿದ್ದೀರಿ. ಬೇರೆ ಕ್ಯಾಂಟೀನ್‌ಗಳು ವಿಧಾನ ಸೌಧದ ಪಕ್ಕದಲ್ಲಿರುವುದಕ್ಕೆ ಅವಕಾಶ ಕೊಟ್ಟಿದ್ದೀರಿ. ಆ ಕ್ಯಾಂಟೀನ್‌ಗಳಲ್ಲಿ ಏನಾದರೂ ತಿಂದರೆ ತಕ್ಷಣ ಆಸ್ಪತ್ರೆಗೆ ಹೋಗಬೇಕಾಗುತ್ತದೆ. ಇಲ್ಲೇ ಒಂದು ಆಸ್ಪತ್ರೆಯನ್ನೂ ಕೂಡ ನೀವು ಇಟ್ಟಿದ್ದೀರಿ. ಲಾಭದಾಯಕವಾದ ಕ್ಯಾಂಟೀನ್‌ನ್ನು ಬೇರೆಯವರಿಗೆ ಕೊಟ್ಟು ಅವ್ಯವಸ್ಥೆ ಆಗುವಂತೆ ಮಾಡಿದ್ದೀರಿ. ಈ ಕ್ಯಾಂಟೀನ್ ನೌಕರರನ್ನು ಖಾಯಂ ಮಾಡಲು ಏನು ಕ್ರಮ ತೆಗೆದುಕೊಳ್ಳುತ್ತೀರೆಂಬುದನ್ನು ಹೇಳಬೇಕು.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಾದ ಲಕ್ಕಪ್ಪನವರು ಈ ವಿಚಾರವನ್ನು ಮಾನವೀಯತೆಯಿಂದ ಸರ್ಕಾರ ನೋಡಬೇಕೆಂದು ಹೇಳಿದ್ದಾರೆ. ಮತ್ತು ಬಡವರ ಬಗ್ಗೆ ಸರ್ಕಾರಕ್ಕೆ ಕಾಳಜಿ ಇಲ್ಲವೆಂದು ಹೇಳಿದ್ದಾರೆ. ನಾನು ಅವರಿಗೆ ವಿನಯದಿಂದ ಹೇಳುವುದಕ್ಕೆ ಇಷ್ಟಪಡುತ್ತೇನೆ. ಬಡ ಜನರಿಗೆ ಒಳ್ಳೆಯದನ್ನು ಮಾಡುವುದನ್ನು ಸಂಪೂರ್ಣವಾಗಿ ಇವರೇನೂ ಗುತ್ತಿಗೆಗೆ ತೆಗೆದುಕೊಂಡಿಲ್ಲ.

(ಗೊಂದಲ)

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಇದುವರೆಗೂ ಮಾಡಿದ ಟೀಕೆಟಿಪ್ಪಣಿಗಳನ್ನು ನಾನು ಕೇಳಿದ್ದೇನೆ. ಆದರೆ ಒಂದು ಚಕಾರವನ್ನೂ ನಾನು ಎತ್ತಲಿಲ್ಲ. ಈ ಸದನದಲ್ಲಿ ವಿಚಾರ ವಿನಿಮಯ ಆದಾಗ ಅವರು ಎಷ್ಟು ತೀಕ್ಷ್ಣವಾದ ಬಾಣಗಳನ್ನು ನನ್ನ ಕಡೆಗೆ ಬಿಡುತ್ತಾರೋ ಅದೇರೀತಿ ನಾನು ಬಿಡತಕ್ಕ ಬಾಣಗಳನ್ನೂ ಅವರು ತೆಗೆದುಕೊಳ್ಳುವುದಕ್ಕೆ ಸಿದ್ಧವಾಗಿರಬೇಕು. ನಾನು ಈಗಾಗಲೇ ಹೇಳಿದ್ದೇನೆ, ಈ ಕ್ಯಾಂಟೀನ್‌ನಲ್ಲಿ ತಾತ್ಕಾಲಿಕವಾಗಿ ನೌಕರರನ್ನು ನೇಮಕ ಮಾಡಿಕೊಂಡಿದ್ದಾರೆ, ಅವರನ್ನು ಯಾವುದೇ ನಿಯಮಾವಳಿಯ ಪ್ರಕಾರ ನೇಮಕ ಮಾಡಿಕೊಂಡಿಲ್ಲ. ಮೀಸಲಾತಿ ಪದ್ಧತಿಯನ್ನು ಅನುಸರಿಸಿ ನೇಮಕ ಮಾಡಿಕೊಂಡಿಲ್ಲ. ಅವರನ್ನು ಖಾಯಂ ಮಾಡಬೇಕಾದರೆ ನಾವು ಅನೇಕ ವಿಚಾರಗಳನ್ನು ಯೋಚನೆ ಮಾಡಬೇಕಾಗುತ್ತದೆ.

೧-೦೦ ಪಿ.ಎಂ.

ಆದ್ದರಿಂದ ಮಾನ್ಯ ಸದಸ್ಯರು ಏನು ಹೇಳಿರುತ್ತಾರೋ ಅದರ ಬಗ್ಗೆ ಯೋಚನೆ ಮಾಡಬೇಕಾಗುತ್ತದೆಂದು ಹೇಳುತ್ತೇನೆ. ಬೇರೆ ಬೇರೆ ರಾಜ್ಯಗಳಲ್ಲಿ ಇಂಥ ಪರಿಸ್ಥಿತಿ ಇದಿಯೇ ? ಅಲ್ಲಿ ಏನು ಮಾಡಿದ್ದಾರೆ ಎನ್ನುವುದನ್ನು ತಿಳಿದುಕೊಳ್ಳುವುದಕ್ಕೂ ಸ್ಥಳವಾಗಿ ಮಾಹಿತಿಯನ್ನು ತರಿಸಿಕೊಳ್ಳುತ್ತೇನೆಂದು

ಹೇಳಿದ್ದೇನೆ. ಮಾಹಿತಿಯನ್ನು ತರಿಸಿಕೊಂಡಮೇಲೆ ತಾನೆ ನು ಮಾಡುತ್ತೇನೆಂಬುದು ಗೊತ್ತಾಗು ವುದು. ಈಗಾಗಲೇ ಇದರ ಬಗ್ಗೆ ಪ್ರತಕ್ಕೆ ಚಿಂತೆ ಎಂದು ಮಾನ್ಯ ಸದಸ್ಯರಲ್ಲಿ ಕೇಳಿಕೊಳ್ಳುತ್ತೇನೆ.

(ಗೊಂದಲ)

ಅಧ್ಯಕ್ಷರು.—ಮಾನ್ಯ ಸಚಿವರು ಮಾಹಿತಿಯನ್ನು ತರಿಸಿಕೊಳ್ಳುತ್ತೇನೆಂದು ಹೇಳಿರುತ್ತಾರೆ. ಆದ್ದರಿಂದ ಮಾನ್ಯ ಸದಸ್ಯರು ಕುಳಿತುಕೊಳ್ಳಬೇಕೆಂದು ಹೇಳುತ್ತೇನೆ.

ಶ್ರೀ ಆರ್. ಎನ್. ನಾಯಕ್.—ಮಾನ್ಯ ಅಧ್ಯಕ್ಷರೇ ನಾನು ಕೇಳಿದ ಪ್ರಶ್ನೆಗೆ ಮಾನ್ಯ ಸಚಿವರು ಉತ್ತರ ಕೊಡಲಿಲ್ಲ.

ಅಧ್ಯಕ್ಷರು.—ಮಾನ್ಯ ಸಚಿವರು ಸರಿಯಾಗಿಯೇ ಉತ್ತರವನ್ನು ಕೊಟ್ಟಿರುತ್ತಾರೆ. ಮಾಹಿತಿ ಯನ್ನು ತರಿಸಿಕೊಳ್ಳುತ್ತೇನೆಂದು ಹೇಳಿರುತ್ತಾರೆ. ಈಗ ತಾವು ಏನು ಮಾತನಾಡಿದರೂ ಅಧಿಕೃತ ವರದಿಯಲ್ಲಿ ಅದು ದಾಖಲಾಗುವುದಿಲ್ಲ. ಆದ್ದರಿಂದ ತಾವು ದಯವಿಟ್ಟು ಕುಳಿತುಕೊಳ್ಳಬೇಕು.

(ಗೊಂದಲ)

ಶ್ರೀ ಆರ್. ಎನ್. ನಾಯಕ್.—ಎರಡುಕಡೆ ಗೆಸ್ಟ್ ಹೌಸ್‌ಗಳಲ್ಲಿ ಯಾವ ರೀತಿಯಾವ ಸವ-ಅತ್ತುಗಳನ್ನು ಕೊಟ್ಟಿರುತ್ತಾರೆಯೋ ಅದೇ ರೀತಿಯಲ್ಲಿ ಇವರಿಗೂ ಕೊಡಬೇಕೆಂದು ಹೇಳುತ್ತೇನೆ.

ಅಧ್ಯಕ್ಷರು,—ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿರುತ್ತಾರೆ. ವಿಷಯ ಮುಗಿದಿರುತ್ತದೆ. ಇಷ್ಟಿಳಿಸೇ ನಿಯಮದ ಮೇರೆಗೆ ಮಾನ್ಯ ಮಲ್ಲಪ್ಪನವರು ತಾವು ಓದಿ ಸರ್ಕಾರದ ಗಮನವನ್ನು ಸೆಳೆಯಬಹುದು.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಮಾನ್ಯ ಅಧ್ಯಕ್ಷರೇ ಬಹಳ ಸಿಂಪಲ್ ಕ್ವಶ್ಚನ್ ಇರುತ್ತದೆ. ಕರ್ನಾಟಕ ಭವನ ದಲ್ಲಿರತಕ್ಕಂತ ಸೌಲಭ್ಯವನ್ನು ಕೊಡಬೇಕೆಂದು ಕೇಳಿರುತ್ತಾರೆ.....

ಅಧ್ಯಕ್ಷರು.—ಮಾನ್ಯ ಖರ್ಗೆಯವರು ತಾವು ಉಪನಾಯಕರಿದ್ದೀರಿ. ತಾವು ಪರಿಸ್ಥಿತಿಯನ್ನು ತಿಳಿದುಕೊಳ್ಳಬೇಕು. ಈ ರೀತಿ ಮಾತನಾಡಿದರೆ.....

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಉಪನಾಯಕರೆಂದರೆ ಮಾತನಾಡದೆ ಕುಳಿತುಕೊಳ್ಳ ಬೇಕೆಂದು ಹೇಳುತ್ತೀರಾ ? ತಾವು ನಮಗೆ ರಕ್ಷಣೆ ಕೊಡದಿದ್ದರೆ ಮತ್ತೆ ಯಾರು ರಕ್ಷಣೆಗೆ ಬರುತ್ತಾರೆ. ಇದು ಬಹಳ ಸುಲಭವಾದ ಪ್ರಶ್ನೆ ಇರುತ್ತದೆ.

ಅಧ್ಯಕ್ಷರು.—ನಾನು ಈಗಾಗಲೇ ವಿಷಯವನ್ನು ಮುಗಿಸಿರುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿರುತ್ತಾರೆ, ವಿಷಯ ಮುಗಿದಿದೆ ಎಂದು ತಾವು ಹೇಳಿದರೆ ಅವರು ಹೊರಟೇ ಹೋಗಿಬಿಡುತ್ತಾರೆ.

(ಗೊಂದಲ)

ಅಧ್ಯಕ್ಷರು.—ಎಲ್ಲರೂ ಕೂರಿ ಹೇಳುತ್ತೇನೆ, ಶ್ರೀಮತಿ ನಾಗರತ್ನಮ್ಮನವರು ಅಧ್ಯಕ್ಷಿಣಿ ಆಗಿದ್ದ ಕಾಲದಲ್ಲಿ ಪ್ರತಿ ದಿವಸ ಎರಡು ಗಮನ ಸೆಳೆಯುವ ಸೂಚನೆಗಳನ್ನು ಇಡುತ್ತಿದ್ದರು ನಾನು ಈಗ ನಾಲ್ಕು ಹಾಕುತ್ತಿದ್ದೆನೆ ಆ ಕಡೆ ಈ ಕಡೆ ಎರಡೂ ಕಡೆಯ ಸದಸ್ಯರಿಗೆ ಅವಕಾಶ ಕೊಡಬೇಕೆಂದು ಆ ಗಮನ ಸೆಳೆಯುವ ಸೂಚನೆಗಳನ್ನು ಇಟ್ಟಿದ್ದೇನೆ. ಈಗಾಗಲೇ ಸಿ ಗಮನ ಸೆಳೆಯುವ ಸೂಚನೆಗಳಿಗೂ ಒಂದೊಂದು ಸಾರಿ ಕೇಳಲು ಅವಕಾಶ ಕೊಟ್ಟಿದ್ದೇನೆ. ಆದೇ ರೀತಿ ಸಂಬಂಧಪಟ್ಟವರು ಕೇಳಿದ್ದಾರೆ ಮತ್ತೆ ಕೊಡುವುದಕ್ಕೆ ಸಾಧ್ಯವಿಲ್ಲ ರೂಲ್ ೩೩ಳಿರ ಪ್ರಶ್ನೆಗಳು ಸುಮಾರು ೨೨ ಇವೆ. ದಿನಕ್ಕೆ ೫-೬ ಮಾತ್ರ ಇಡಬೇಕೆಂದು ಇದ್ದರೂ ಸದಸ್ಯರು ವಿಚಾರಗಳನ್ನು ಸರ್ಕಾರದ ಗಮನಕ್ಕೆ ತರಲಿ ಎಂಬ ಉದ್ದೇ-ಶದಿಂದ ೨೨ನ್ನು ಇಟ್ಟಿದ್ದೇನೆ. ಇಷ್ಟೆಲ್ಲ ಅವಕಾಶ ಕೊಟ್ಟರೂ ಮತ್ತೆ ಮತ್ತೆ ಕಾಡಿಸುತ್ತಿದ್ದರೆ ಇದರ ಅರ್ಥವೇನು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಮ್ಮ ಮಾತನ್ನು ತಾವು ಸ್ವಲ್ಪ ಕೇಳಬಹುದಲ್ಲ.

ಅಧ್ಯಕ್ಷರು.—ಮಲ್ಲಪ್ಪನವರೇ ಓದಿ ಹೇಳಿ.

ಶ್ರೀಮತಿ ಕೆ.ಎಸ್. ನಾಗರತ್ನಮ್ಮ.—ತಮಗೆ ನಾವು ಅಭಾರಿಯಾಗಿದ್ದೇವೆ. ಅವರು ಕೇಳ ತಕ್ಕದ್ದು ಪಿಂಪಲ್ ಆಗಿದೆ. ರೋಸ್ಟರ್ ಪ್ರಕಾರ ರೆಗ್ಯುಲರೈಸ್ ಮಾಡಿ ಕೊಡಿ ಎಂದು ಕೇಳುತ್ತಿದಾರೆ ಅದಕ್ಕೆ ಆಗಬಹುದು ಅಥವಾ ಇಲ್ಲ ಎಂದು ಹೇಳುವುದಕ್ಕೆ ತೊಂದರೆಯೇನು ?

ಅಧ್ಯಕ್ಷರು.—ಮಾಹಿತಿ ತರಿಸಿಕೊಂಡು ಹೇಳುತ್ತೇನೆಂದು ಹೇಳಿದ್ದಾರೆ.

ಶ್ರೀ ಎ. ಲಕ್ಷ್ಮೀಸಾಗರ್.—ಕರ್ನಾಟಕ ಭವನದಲ್ಲಿ ಮತ್ತು ಕುಮಾರ ಕೃಪದಲ್ಲಿ ನೇಮಕಗೊಂಡಿರತಕ್ಕ ಕೆಲಸಗಾರರು ಸಿಆಂಡ್ ಆರ್‌ರೂಲ್ಸ್ ಪ್ರಕಾರ ನೇಮಕಗೊಂಡಿದ್ದಾರೆ. ಇಲ್ಲಿರತಕ್ಕ ಪ್ರಶ್ನೆ ಅವರು ಆ ರೀತಿ ನೇಮಕಗೊಂಡಿಲ್ಲ ಎಂದು ಅದಕ್ಕೊಸ್ಕರ ಆ ನಿಯಮವನ್ನು ಇವರಿಗೆ ಅನ್ವಯಿಸುವುದಕ್ಕಾಗುವುದಿಲ್ಲ.

ನಿಯಮ ೩೫೪ರ ಮೇರೆಗೆ

ಎನ್.ಆರ್. ಡಬ್ಲ್ಯೂ ಸ್ಕೀಮಿನಿಂದ ಕುಡಿಯುವ ನೀರನ್ನು ಅರಕಲಗೋಡು ತಾಲ್ಲೂಕಿನ ಹಳ್ಳಿಗಳಿಗೆ ಒದಗಿಸುವ ಬಗ್ಗೆ

ಶ್ರೀ ಕೆ.ಬಿ. ಮಲ್ಲಪ್ಪ.—ಅರಕಲಗೂಡು ತಾಲ್ಲೂಕಿನಲ್ಲಿ ಸುಮಾರು ೩೦೦ ಹಳ್ಳಿಗಳು ಇದ್ದು ಸದರಿ ಹಳ್ಳಿಗಳಿಗೆ ಸಂಬಂದಿಸಿದಂತೆ ೨೫೦ ಕೊಪ್ಪಲುಗಳಿದ್ದು ಎಲ್ಲಾ ಹಳ್ಳಿಗಳಿಗೂ ಕುಡಿಯುವ ನೀರಿನ ಸರಬರಾಜು ಆಗಿರುವುದಿಲ್ಲ. ಕೆಲವು ಹಳ್ಳಿಗಳಿಗೆ ಕೊಳವೆ ಬಾವಿಗಳನ್ನು ಆಳವಡಿಸಿದ್ದರೂ ಕೆಲವು ಕೆಟ್ಟು ಹೋಗಿ ರಿಪೇರಿ ಇಲ್ಲದೆ ಸಂಬಂಧಪಟ್ಟ ಹಳ್ಳಿಯವರು ಕುಡಿಯುವ ನೀರಿಗೆ ಬಹಳ ತೊಂದರೆ ಪಡುವಂತಾಗಿದೆ. ಕೆಲವು ಹಳ್ಳಿಗಳಲ್ಲಿ ಎನ್. ಆರ್. ಡಬ್ಲ್ಯೂ. ಎಸ್. ಮತ್ತು ಮಿನಿ ವಾಟರ್ ಸಪ್ಲೈ ಸ್ಕೀಂನಲ್ಲಿ ತೆಗೆದುಕೊಂಡ ಕೆಲವು ಅರ್ಧಕ್ಕೆ ನಿಂತಿರುವ ಬಗ್ಗೆ ಮಾನ್ಯ ಪಂಚಾಯಿತ್ ರಾಜ್ಯ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಈ ವಿಚಾರವನ್ನು ಸಂಬಂಧಪಟ್ಟ ಸಚಿವರ ಗಮನಕ್ಕೆ ತಂದು ಉತ್ತರ ಕೊಡಿಸುತ್ತೇನೆ.

ರಾಣೆಬೆನ್ನೂರು ತಾಲ್ಲೂಕು ಕುಪ್ಪಲೂರು ಗ್ರಾಮದಲ್ಲಿ ಸ್ವಾಧೀನ ಪಡಿಸಿಕೊಂಡ ಜಮೀನಿಗೆ ಪರಿಹಾರಧನ ಪಾವತಿಯಾಗದಿರುವುದು

ಶ್ರೀ ಕೆ. ಬಿ. ಕೋಳಿವಾಡ್.—ರಾಣೆಬೆನ್ನೂರು ತಾಲ್ಲೂಕು ಕುಪ್ಪೆಲೂರು ಗ್ರಾಮದ ಹತ್ತಿರ ಕುಮುದ್ವತಿ ನದಿಯ ಸೇತುವೆಗೆ ಕೂಡಿಸುವರಸ್ತೆ ನಿರ್ಮಾಣಕ್ಕೆ ಜಮೀನುಗಳನ್ನು ಸ್ವಾಧೀನಪಡಿಸಿಕೊಂಡು ಸುಮಾರು ೧೫ ವರ್ಷಗಳಾಗಿವೆ. ಆವುಗಳ ಬಗ್ಗೆ ರಾಣೆಬೆನ್ನೂರು ಸಿವಿಲ್ ಜಡ್ಜ್ ಕೋರ್ಟಿನಲ್ಲಿ ಅವಾರ್ಡ್ ಸಹ ಆಗಿದ್ದು ಇದೆ. ಸದರಿ ಕೇಸುಗಳ ಬಗ್ಗೆ ವರಖಾಸ್ತು ನಡೆದಿದ್ದು ಅಧಿಕಾರಿಗಳ ಅಲಕ್ಷ್ಯ ತನದಿಂದ ಬೇಳೆ ರೈತರಿಗೆ ಪಣ ಸಿಗುವಂತಾಗಿ ಬಹಳ ತೊಂದರೆಯಾಗಿದೆ ಆದ್ದರಿಂದ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಕ್ತ ಆದೇಶ ನೀಡಿ ಭೇಗನೆ ಬಡ ರೈತರಿಗೆ ಹಣ ಸಿಗುವಂತೆ ಮಾಡುವಿರೆಂಬ ಕಂತೊ ಪಲದಿಂದ ಈ ವಿಷಯವನ್ನು ಮಾನ್ಯ ಕಂದಾಯ ಮಂತ್ರಿಗಳ ಗಮನಕ್ಕೆ ತರಬಯಸುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಅಧ್ಯಕ್ಷರೇ ನಾನು ಈ ಕೆಳಗಿನ ಹೇಳಿಕೆಯನ್ನು ನೀಡಬಯಸುತ್ತೇನೆ.

ರಾಣೆಬೆನ್ನೂರು ತಾಲ್ಲೂಕು, ಕುಮುದ್ವತಿ ನದಿಯ ಸೇತುವೆಗೆ ಕೂಡಿಸುವ ರಸ್ತೆ ನಿರ್ಮಾಣಕ್ಕಾಗಿ ಕುಪ್ಪೆಲೂರ, ಗೋಡಿಹಾಳ ಮತ್ತು ಯಲಬಡಗಿ ಗ್ರಾಮಗಳಲ್ಲಿ ಈ ಕೆಳಗೆ ವಿವರಿಸಿದಂತೆ ಒಟ್ಟು ೨೮ ಎಕರೆ ೨೨ ಗುಂಟೆ ೦೩ ಚೆದುರ ಅಡಿ ಕ್ಷೇತ್ರದ ಜಮೀನುಗಳನ್ನು ಸ್ವಾಧೀನ ಮಾಡಲು ಆದೇಶವನ್ನು ಹೊರಡಿಸಲಾಗಿದ್ದು, ಕಲಂ ೬(೧)ರ ಅಧಿಸೂಚನೆಯು ದಿನಾಂಕ ೫-೭-೧೯೭೫ರ ರಾಜ್ಯ ಪತ್ರದಲ್ಲಿ ಪ್ರಕಟವಾಗಿದೆ.